ಇ) ಮುಂದಿನ ಸಾಲುಗಳಲ್ಲಿ ವಿದ್ಯಾರ್ಥಿನಿಲಯಗಳ ಪ್ರಾರಂಭಕ್ಕಾಗಿ ಆಯವ್ಯಯದಲ್ಲಿ ಒದಗಿಸಲಾಗಿರುವ ಅನುದಾನದ ಮೇರೆಗೆ ಬೇಡಿಕೆಯನುಸಾರ ಹಂತ ಹಂತವಾಗಿ ಹೊಸ ವಿದ್ಯಾರ್ಥಿನಿಲಯಗಳನ್ನು ಮಂಜೂರು ಮಾಡುವ ಬಗ್ಗೆ ಕ್ರಮವಹಿಸಲಾಗುವುದು.

2685 (2300) ಶ್ರೀ ಪಾಪರೆಡ್ಡಿ ಎ. (ರಾಯಚೂರು) :– ಮಾನ್ಯ ಪಶುಸಂಗೋಪನೆ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಯಚೂರು ಮತಕ್ಷೇತ್ರದಲ್ಲಿ ಜಾನುವಾರು ಆರೋಗ್ಯ ಕೇಂದ್ರಗಳು ಎಷ್ಟಿವೆ;

ಆ) ಈ ಇಲಾಖೆಗೆ 2004–05ರಲ್ಲಿ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ;

ಇ) ಯಾವ ಯಾವ ಯೋಜನೆಗಳಿಗಾಗಿ ಹಣ ಬಿಡುಗಡೆ ಮಾಡಲಾಗಿದೆ;

ಈ) ಈ ಕ್ಷೇತ್ರವಲ್ಲಿ ಎಷ್ಟು ಜನ ವೈದ್ಯರಿದ್ದಾರೆ ಸಿಬ್ಬಂದಿ ವರ್ಗ ಎಷ್ಟಿದೆ; ನೇಮಕವಾಗಿರುವವರೆಷ್ಟು ಹಾಗೂ ಈಗ ಕರ್ತವ್ಯದಲ್ಲಿರುವರು ಎಷ್ಟು;

ಉ) ಪಶುಸಂಗೋಪನೆ ಇಲಾಖೆಯಿಂದ ಜಾನುವಾರುಗಳಿಗಾಗಿ ರೈತರಿಗೆ ಕೊಡುವ ಸೌಲಭ್ಯಗಳು ಯಾವುವು;

ಊ) ಇದುವರೆಗೆ ಯಾವ ಫಲಾನುಭವಿಗಳಿಗೆ ಸೌಲಭ್ಯಗಳು ನೀಡಲಾಗಿದೆ;

ಋ) ಪಶು ಪ್ರಾಣಿಗಳ ಚಿಕಿತ್ಸೆಗಾಗಿ ನೀಡುವ ಔಷಧಿಗಳನ್ನು ನೀಡದೇ ಬಂದಂತಹ ರೈತರಿಗೆ ಹೊರಗಿನಿಂದ ತರಿಸುವಂತೆ ತೊಂದರೆ ನೀಡುತ್ತಿರುವುದನ್ನು ತಪ್ಪಿಸಲು ತೆಗೆದುಕೊಂಡ ಕ್ರಮಗಳೇನು;

ಋ) ಬಹಳ ವರ್ಷಗಳಿಂದ ಇಲ್ಲಿಯೇ ಇರುವ ಅಧಿಕಾರಿಗಳು ಬೇನಾಮಿ ಹೆಸರಿನಲ್ಲಿ ಔಷಧಿ ಇನ್ನಿತರ ಸರಕಾರದ ಸೌಲಭ್ಯಗಳನ್ನು ಮಾಡಿಕೊಂಡು ರೈತರಿಗೆ ಅನ್ಯಾಯವಾಗುತ್ತಿರುವುದರ ಬಗ್ಗೆ ಕ್ರಮ ಜರುಗಿಸಲಾಗುವುದೇ?

ಶ್ರೀ ಮೆರಾಜುದ್ದೀನ್ ಎನ್. ಪಟೇಲ್ (ಪಶುಸಂಗೋಪನೆ ಮತ್ತು ವಕ್ಫ್ ಸಚಿವರು):

ಅ) ರಾಯಚೂರು ಮತಕ್ಷೇತ್ರದಲ್ಲಿ ಒಟ್ಟು 8 ವಿವಿಧ ಪಶುವೈದ್ಯಕೀಯ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ. ವಿವರ ಈ ಕೆಳಕಂಡಂತಿದೆ.

ಸಂಸ್ಥೆಗಳು	ಸಂಖ್ಯೆ
ಪಶು ಆಸ್ಪತ್ರೆ	1
ಪಶು ಚಿಕಿತ್ಸಾಲಯ	2
ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರ	4
ಸಂಚಾರಿ ಪಶು ಚಿಕಿತ್ಸಾಲಯ	1
ಒಟ್ಟು	**8**

ಆ) 2004–05 ಸಾಲಿನಲ್ಲಿ ರೂ.18.80 ಲಕ್ಷಗಳನ್ನು ಯೋಜನೆಯಡಿಯಲ್ಲಿ ಬಿಡುಗಡೆ ಮಾಡಿದೆ.

ಇ)

(ರೂ.ಲಕ್ಷಗಳಲ್ಲಿ)

ಸಿಬ್ಬಂದಿಯ ವೇತನಕ್ಕಾಗಿ	18.21
ಪಶುಚಿಕಿತ್ಸಾ ಶಿಬಿರ	00.05
ಗಿರಿಜನ ಉಪಯೋಜನೆ	00.50
ವಿಶೇಷ ಜಾನುವಾರು ತಳಿ ಅಭಿವೃದ್ಧಿ ಯೋಜನೆ	00.04
ಒಟ್ಟು	**18.80**

ಅಲ್ಲದೆ, ಈ ಸಾಲಿನಲ್ಲಿ ರೂ.2.05 ಲಕ್ಷ ಮೌಲ್ಯದ ಔಷಧಿಗಳು ಹಾಗೂ ರೂ.7,000/– ಮೌಲ್ಯದ ಕಾಲು ಬಾಯಿ ಜ್ವರದ ಲಸಿಕೆ ರಾಯಚೂರು ಮತಕ್ಷೇತ್ರದ ವ್ಯಾಪ್ತಿಗೆ ಬರುವ ಪಶುವೈದ್ಯಕೀಯ ಸಂಸ್ಥೆಗಳಿಗೆ ಸರಬರಾಜು ಮಾಡಲಾಗಿದೆ.

ಈ)

ಹುದ್ದೆಗಳು	ಮಂಜೂರು	ಭರ್ತಿ	ಖಾಲಿ
ಸಹಾಯಕ ನಿರ್ದೇಶಕರು	1	0	1
ಪಶುವೈದ್ಯಾಧಿಕಾರಿ	4	2	2
ಪಶುವೈದ್ಯ ಮೇಲ್ವಿಚಾರಕರು	1	1	0
ಹಿರಿಯ ಪಶುವೈದ್ಯ ಪರೀಕ್ಷಕರು	5	5	0
ಪಶುವೈದ್ಯ ಪರೀಕ್ಷಕರು	4	3	1
ಪಶುವೈದ್ಯ ಸಹಾಯಕರು	6	4	2
ಪ್ರಥಮ ದರ್ಜೆ ಸಹಾಯಕರು	1	1	0
ವಾಹನ ಚಾಲಕರು	1	0	1
ಡಿ ದರ್ಜೆ ನೌಕರರು	13	13	0
ಒಟ್ಟು	**36**	**29**	**7**

ಉ) ಚಿಕಿತ್ಸೆ ತಳಿ ಅಭಿವೃದ್ಧಿ ಸೇವೆಗಳು ರೋಗ ನಿರೋಧಕ ಚುಚ್ಚು ಮದ್ದು ಮತ್ತು ಜಂತು ನಾಶಕ ಔಷಧಿ ವಿತರಣೆ, ವಿಸ್ತರಣಾ ಚಟುವಟಿಕೆಗಳು ಸಂಚಾರಿ ಸೇವೆಗಳು, ಆರೋಗ್ಯ ಶಿಬಿರ, ಬರಡು ರಾಸು ಶಿಬಿರ, ಆರೋಗ್ಯ ತಪಾಸಣೆ, ರೋಗ ಪತ್ತೆ ಪ್ರಯೋಗಾಲಯ ಸೇವೆಗಳು, ಮೇವು ಅಭಿವೃದ್ಧಿ, ಕುಕ್ಕುಟ ಮತ್ತು ಹೈನುಗಾರಿಕೆಯಲ್ಲಿ ರೈತರಿಗೆ ತರಬೇತಿ.

ಪ್ರಸ್ತುತ ವರ್ಷದಲ್ಲಿ 21 ಜಿಲ್ಲೆಗಳ 80 ತಾಲ್ಲೂಕುಗಳ ಬರಪೀಡಿತವೆಂದು ಘೋಷಣೆ ಮಾಡಿರುತ್ತಾರೆ. ಹಾಗೂ ಪ್ರತಿ ಜಿಲ್ಲೆಗೆ ರೂ.5.00 ಲಕ್ಷದಂತೆ ರೂ.1.05 ಕೋಟಿಗಳನ್ನು ಮೇವಿನ ಬೀಜದ ಕಿರು ಪೊಟ್ಟಣಗಳು ಖರೀದಿಸಿ ನೀರಾವರಿ ಹೊಂದಿರುವ ರೈತರಿಗೆ ಉಚಿತವಾಗಿ ಸರಬರಾಜು ಮಾಡಲು ಬಿಡುಗಡೆ ಮಾಡಿದೆ. ಈ ಕಾರಣದಿಂದ ನೀರಾವರಿ ಪ್ರದೇಶದ ರೈತರು ಹೆಚ್ಚಿನ ಮೇವನ್ನು ಬೆಳೆದು ಬೇಸಿಗೆಯಲ್ಲಿ ಕೊರತೆ ಕಂಡು ಬರುವ ಸ್ಥಳಗಳಿಗೆ ಮೇವನ್ನು ಸಾಗಾಣಿಕೆಯನ್ನು ಕಂದಾಯ ಇಲಾಖೆಯ ಸಹಕಾರದೊಂದಿಗೆ ಸಾಗಾಣಿಕೆ ಮಾಡಿ ಬರಪರಿಸ್ಥಿತಿಯಲ್ಲಿ ಉಂಟಾಗಬಹುದಾದ ಮೇವಿನ ಕೊರತೆಯನ್ನು ನೀಗಿಸಲಾಗುವುದು. ಅವಶ್ಯಕತೆ ಕಂಡು ಬಂದಲ್ಲಿ ಕಂದಾಯ ಇಲಾಖೆ ಗೋಶಾಲೆಗಳನ್ನು ತೆರೆದು ಮೇವನ್ನು ಬಡರೈತರ ಜಾನುವಾರುಗಳಿಗೆ ಒದಗಿಸಲಾಗುವುದು.

ಊ) ರಾಯಚೂರು ಮತಕ್ಷೇತ್ರದ ವ್ಯಾಪ್ತಿಯಲ್ಲಿ ವಿಶೇಷ ಜಾನುವಾರು ತಳಿ ಅಭಿವೃದ್ಧಿ ಯೋಜನೆ ಅಡಿಯಲ್ಲಿ ರಂಗಮ್ಮ ಕೋಂ ಪೆನ್ನಪ್ಪ, ಗುರದಿಪಾಡ್ ಈ ಫಲಾನುಭವಿಯು ಯೋಜನೆಯ ಪ್ರಯೋಜನೆ ಪಡೆದಿರುತ್ತಾರೆ. ಡೆಸರ್ಟ್ ಡೆವಲಪ್‌ಮೆಂಟ್ ಪ್ರೋಗ್ರಾಂ (ವಾಟರ್‌ಶೆಡ್) ಈ ಯೋಜನೆಯಲ್ಲಿ 2003–04ರ ಸಾಲಿನಲ್ಲಿ ಆರು ಫಲಾನುಭವಿಗಳು (ಯಾಪಲದಿನ್ನಿಯ ರಂಗಮ್ಮ ಕೋಂ ಜಂಗ್ಲಪ್ಪ, ಮಾನಪ್ಪ ಬಿನ್ ಹನುಮಂತ, ಶಂಕರಮ್ಮ ಕೋಂ ಜಗನ್ನಾಥ, ಈರಮ್ಮ ಕೋಂ ಆಂಜನೇಯ, ತಾಯಮ್ಮ ಕೋಂ ತಾಯಿರೆಡ್ಡಿ ಮತ್ತು ವನಜಾಕ್ಷಿ ಕೋಂ ಸುರೇಶ) ಇವರುಗಳಿಗೆ ಎಮ್ಮೆ ಘಟಕಗಳನ್ನು ಒದಗಿಸಲಾಗಿದೆ. 2004–05ನೇ ಸಾಲಿನಲ್ಲಿ ಒಟ್ಟು ಆರು ಫಲಾನುಭವಿಗಳಿಗೆ (ದೊಂಗರಾಂಪುರದ ರಾಣಮ್ಮ ಕೋಂ ವೆಂಕಟೇಶ, ರಾಧಿಕ ಕೋಂ ವೆಂಕಟೇಶ, ಶ್ಯಾಮಲಮ್ಮ ಕೋಂ ಪರಂದಾಮುಲು, ಆಂಜನಮ್ಮ ಕೋಂ ದವಲಪ್ಪ, ಪಾರ್ವತಿ ಕೋಂ ಜಂಗಲಪ್ಪ ಮತ್ತು ಜಯಮ್ಮ ಕೋಂ ವೆಂಟಕರೆಡ್ಡಿ) ಎಮ್ಮೆ ಘಟಕಗಳನ್ನು ಒದಗಿಸಲಾಗಿದೆ.

ಋ) ಇಲಾಖೆಯಿಂದ ಸರಬರಾಜು ಹಾಗೂ ಜಿಲ್ಲಾ ಪಂಚಾಯಿತಿಯಿಂದ ಖರೀದಿಸಿದ ಔಷಧಿಗಳನ್ನು ಜಾನುವಾರುಗಳ ಚಿಕಿತ್ಸೆಗೆ ಉಚಿತವಾಗಿ ನೀಡಲಾಗುತ್ತಿದೆ. ಇಲಾಖೆಯಿಂದ ಸರಬರಾಜಾಗಿಲ್ಲದ ಔಷಧಿ ಮಾತ್ರ ಅವಶ್ಯಕವಾಗಿ ಬೇಕಾಗಿರುವ ಸಂದರ್ಭದಲ್ಲಿ ಮಾತ್ರ ಜಾನುವಾರುಗಳ ಆರೋಗ್ಯ ದೃಷ್ಟಿಯಿಂದ ಬರೆದುಕೊಡಲಾಗುತ್ತಿದೆ. ಇಲಾಖೆಯಿಂದ

ಔಷಧಿಗಳನ್ನು ಸಾಕಷ್ಟು ಪ್ರಮಾಣದಲ್ಲಿ ವಂಟನದ ಕೊರತೆಯಿಂದ ಸಮರ್ಪಕವಾಗಿ ಸರಬರಾಜು ಮಾಡಲು ಆಗುತ್ತಿಲ್ಲ. 2005–06ನೇ ಸಾಲಿನಲ್ಲಿ ಔಷಧಿ ಖರೀದಿಗಾಗಿ ಹೆಚ್ಚಿನ ವಂಟನವನ್ನು ನಿಗದಿಪಡಿಸಲಾಗಿದೆ.

ಖಂ) ಇಂತಹ ಪ್ರಕರಣ ವರದಿಯಾಗಿರುವುದಿಲ್ಲ.

2686 (2301) ಶ್ರೀ ಪಾಪರೆಡ್ಡಿ ಎ. (ರಾಯಚೂರು) :– ಮಾನ್ಯ ಬೃಹತ್, ಮಧ್ಯಮ, ಸಣ್ಣ ಕೈಗಾರಿಕೆ ಹಾಗೂ ಮೂಲಭೂತ ಸೌಕರ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಯಚೂರಿನಲ್ಲಿ ಸರ್ಕಾರವು ಇಂಡಸ್ಟ್ರೀಯಲ್ ಗ್ರೋತ್ ಸೆಂಟರ್‌ಗಾಗಿ 1000 ಎಕರೆ ಜಮೀನು ಸ್ವಾಧೀನಪಡಿಸಿಕೊಂಡಿರುವುದು ನಿಜವೇ;

ಆ) ಹಾಗಿದ್ದಲ್ಲಿ ಎಲ್ಲಾ ಮೂಲಭೂತ ಸೌಕರ್ಯಗಳು ಇಲ್ಲಿ ಇದ್ದರೂ ಸರ್ಕಾರವು ಏಕೆ ನಿರ್ಲಕ್ಷ್ಯತನವನ್ನು ತೋರಲಾಗುತ್ತಿದೆ. ಹಾಗಿದ್ದಲ್ಲಿ ಈ ಬಗ್ಗೆ ಯಾವ ಕ್ರಮ ಜರುಗಿಸಲಾಗುವುದು;

ಇ) ರಾಯಚೂರು ಹಾಗೂ ಹಾಸನಗಳಲ್ಲಿ ಬೃಹತ್ ಕೈಗಾರಿಕೆ ಸ್ಥಾಪನೆ ಬಗ್ಗೆ ಪತ್ರಿಕೆಗಳಲ್ಲಿ ಪ್ರಕಟವಾಗಿರುವ ವಿಷಯ ನಿಜವೇ;

ಈ) ರಾಯಚೂರಿನಲ್ಲಿ ಬೃಹತ್ ಕೈಗಾರಿಕೆ ಇಲ್ಲದಿರುವುದರಿಂದ ವಿದ್ಯಾವಂತ ನಿರುದ್ಯೋಗಿಗಳು ಹಾಗೂ ಗ್ರಾಮದ 50% ಯುವಕರು ಉದ್ಯೋಗ ಹುಡುಕುತ್ತಾ ಬೇರೆ ಬೇರೆ ಕಡೆ ವಲಸೆ ಹೋಗುತ್ತಿರುವುದು ಸರ್ಕಾರಕ್ಕೆ ತಿಳಿದಿದೆಯೇ;

ಉ) ರಾಯಚೂರಿನಲ್ಲಿ ಬೃಹತ್ ಕೈಗಾರಿಕೆಯ ಸ್ಟೀಲ್ ಪ್ಲಾಂಟ್ ತೆರೆಯಲು ಎಲ್ಲ ಸೌಕರ್ಯಗಳು ಇರುವುದರಿಂದ ಈ ಪ್ಲಾಂಟ್‌ನ್ನು ತೆರೆಯಲು ಏನು ಕ್ರಮ ತೆಗೆದುಕೊಳ್ಳಲಾಗಿದೆ?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಬೃಹತ್, ಮಧ್ಯಮ, ಸಣ್ಣ ಕೈಗಾರಿಕೆ ಹಾಗೂ ಮೂಲಭೂತ ಸೌಕರ್ಯ ಸಚಿವರು) :

ಅ) ರಾಯಚೂರು ಕೈಗಾರಿಕಾ ಬೆಳವಣಿಗೆ ಕೇಂದ್ರ ಸ್ಥಾಪನೆಗಾಗಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯವರು 1,999 ಎಕರೆ ಜಮಿನನ್ನು ಭೂ ಸ್ವಾಧೀನ ಪಡಿಸಿಕೊಂಡಿದ್ದಾರೆ.